**ಕರ್ನಾಟಕ ಸರ್ಕಾರ**

ಸಂ.ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:17-04-2021.

**ಪರಿಷ್ಕೃತ ಆದೇಶ**

ಆದೇಶ ಸಂಖ್ಯೆ: ಕಂಇ 157 ಟಿಎನ್‌ಆರ್ 2020 ದಿನಾಂಕ:29.03.2021ರಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ, 2005ರ ಸೆಕ್ಷನ್ 69ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಪತ್ತು ನಿರ್ವಹಣಾ ಕಾಯ್ದೆ ಸೆಕ್ಷನ್ 22ರ ಸಬ್ ಸೆಕ್ಷನ್ 2 (ಹೆಚ್) ರಡಿ ಮತ್ತು ಸೆಕ್ಷನ್ 24ರ (ಎ) (ಬಿ) (ಎಫ್) (ಹೆಚ್) (ಜೆ) (ಕೆ) ಮತ್ತು (ಎಲ್)ರಡಿ ಬೆಂಗಳೂರು ನಗರದಲ್ಲಿ ಕೋವಿಡ್-19 ಸೋಂಕು ಹರಡುವಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ನಿರ್ವಹಣಾ ಕ್ರಮಗಳ ಮೇಲ್ವಿಚಾರಣೆ ಮತ್ತು ಪರಿಶೀಲಿಸಲು ವಲಯ ಸಂಯೋಜಕರನ್ನು ನೇಮಿಸಲಾಗಿತ್ತು. ಆ ಪೈಕಿ **ಬೊಮ್ಮನಹಳ್ಳಿ** ವಲಯಕ್ಕೆ ಸಂಬಂಧಪಟ್ಟಂತೆ **ಡಾ. ರವಿಕುಮಾರ್ ಸುರಪುರ, ಭಾ.ಆ.ಸೇ.,** ಇವರ ಬದಲಿಗೆ **ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ಭಾ.ಆ.ಸೇ.,** ಇವರನ್ನು ನೇಮಿಸಿದೆ.

ಮೇಲ್ಕಂಡಂತೆ ಗೊತ್ತುಪಡಿಸಿದ ವಲಯ ಸಂಯೋಜಕರು ಆಯುಕ್ತರು, ಬಿಬಿಎಂಪಿ ರವರ ಒಟ್ಟಾರೆ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುವುದು. ವಲಯ ಸಂಯೋಜಕರು ಕೋವಿಡ್-19 ನಿಯಂತ್ರಣ ಮತ್ತು ನಿರ್ವಹಣಾ ಕ್ರಮಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ ನಡೆಸುವುದು. ಜಂಟಿ ಆಯುಕ್ತರು, ಬಿಬಿಎಂಪಿ ಅಧಿಕಾರಿಗಳು ಹಾಗೂ ಎನ್‌ಜಿಓ ಸಂಯೋಜಕರು ಸಂಬಂಧಪಟ್ಟವರ ಕಾರ್ಯ ವ್ಯಾಪ್ತಿ ಕುರಿತು ಅಗತ್ಯ ನೆರವು ಹಾಗೂ ಸಲಹೆ / ಸೂಚನೆಗಳನ್ನು ನೀಡುವುದು.

**(ಎನ್. ಮಂಜುನಾಥ್ ಪ್ರಸಾದ್)** 17/4/2021
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ರಾಜ್ಯ ವಿಪತ್ತು ನಿರ್ವಹಣೆ ಕಾರ್ಯಕಾರಿ
ಸಮಿತಿಯ ಸದಸ್ಯ ಕಾರ್ಯದರ್ಶಿ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.

**ಪ್ರತಿ:**

1. ಆಯುಕ್ತರು, ಬಿಬಿಎಂಪಿ, ಹಡ್ಸನ್ ವೃತ್ತ, ಬೆಂಗಳೂರು.
2. ರಾಜ್ಯ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು.
3. ವಲಯ ಸಂಯೋಜಕರು.